**ನಮೂನೆ - 3A**

ಸರ್ಕಾರಿ ಅಧಿಸೂಚನೆ ಸಂ:RD 190 MUNOMU 2001, Dtd: 28.04.2001 ರ ಅನ್ವಯ ಮುದ್ರಾಂಕ ಶುಲ್ಕ ಹಾಗೂ ಸಂಖ್ಯೆ: ಕಂ ಇ 190 ಮುನೋಮು 2001 ದಿನಾಂಕ 24.05.2001 ರ ಅಧಿಸೂಚನೆಯಂತೆ ನೊಂದಣಿ ಶುಲ್ಕ - ಎರಡನ್ನು ಆಶ್ರಯ ಮತ್ತು ಅಂಬೇಡ್ಕರ್ ವಸತಿ ಯೋಜನೆಗಳಿಗೆ ಸಂಬಂಧಿಸಿದಂತೆ ಸಂಪೂರ್ಣವಾಗಿ ವಿನಾಯಿತಿ ನೀಡಲಾಗಿರುತ್ತದೆ.

## ಕರ್ನಾಟಕ ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ/ಡಾ. ಬಿ.ಆರ್ ಅಂಬೇಡ್ಕರ್ ಜನ್ಮ ಶತಾಬ್ಧಿ ಕಾರ್ಯಕ್ರಮದ ಅಡಿಯಲ್ಲಿ ಪೂರ್ತಿ ಸಹಾಯಧನ ಮಾತ್ರ ಪಡೆದವರು ಬರೆದು ಕೊಡಬೇಕಾದ ಅಡಮಾನ ಪತ್ರ

ಎರಡು ಸಾವಿರದ --------------------ನೆಯ ವರ್ಷದ --------------------- ತಿಂಗಳ ------------ ನೆಯ ದಿನಾಂಕದಂದು, ಒಂದು ಕಡೆಗೆ ಸದ್ಯಕ್ಕೆ ಶ್ರೀ/ಶ್ರೀಮತಿ ------------------------------------------ಗಂಡ/ತಂದೆ------------------------------------------------------------------- (ಇನ್ನು ಮುಂದೆ ಇವರನ್ನು ಅಡಮಾನಕರ್ತ/ಅಡಮಾನಕರ್ತೆ (Mortgager) ಎಂದು ಕರೆಯಲಾಗುವುದು) ಮತ್ತು ಈ ಪದವು ವಿಷಯದಿಂದ ಅಥವಾ ಸಂದರ್ಭದಿಂದ ಹೊರತುಪಡಿಸಿದ್ದ, ಅಥವಾ, ಆ ವಿಷಯಕ್ಕೆ ಅಥವಾ ಸಂದರ್ಭಕ್ಕೆ ಬಾಧೆ ಬಂದ ವಿನಾ, ಅವರ ವಾರಸುದಾರರು, ನಿರ್ವಾಹಕರು, ಆಡಳಿತಗಾರರು ಮತ್ತು ಹಸ್ತಾಂತರಗ್ರಾಹಿ ಎಂಬುದನ್ನು ಒಳಗೊಳ್ಳುವುದು. ಇನ್ನೊಂದು ಕಡೆಗೆ, **ಕರ್ನಾಟಕ ಸರ್ಕಾರದ ಪರವಾಗಿ** ಸರ್ಕಾರಿ ಆದೇಶ ಸಂಖ್ಯೆ: ವಾಇ:183 :ಹೆಚ್ ಎ ಹೆಚ್ :(ಭಾ) 2000, ದಿನಾಂಕ 02.05.2000ದ ಆದೇಶದಂತೆ, **ಈ ವಸತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಪೂರ್ಣ ಜವಾಬ್ದಾರಿಯುಳ್ಳ ಪ್ರಾಧಿಕಾರವೆಂದು ನೇಮಕವಾಗಿರುವ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ,** 4ನೇ ಮಹಡಿ, ಕೆ.ಹೆಚ್.ಬಿ. ಮಳಿಗೆ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು - 560009 **ಇವರ ಪ್ರತಿನಿದಿಯಾದ ವ್ಯವಸ್ಥಾಪಕ ನಿರ್ದೇಶಕರು, ಅಥವಾ ಪದನಿಮಿತ್ತ ಕಾರ್ಯನಿರ್ವಾಹಕ ನಿರ್ದೇಶಕರುಗಳಾದ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಇನ್ನು ಮುಂದೆ ಅಡಮಾನದಾರ (Mortgagee)**ಎಂದು ಕರೆಯಲಾಗುವುದು) ಮತ್ತು ಈ ಪದವು ವಿಷಯದಿಂದ ಅಥವಾ ಸಂದರ್ಭದಿಂದ ಹೊರತುಪಡಿಸಿದ್ದ, ಅಥವಾ, ಆ ವಿಷಯಕ್ಕೆ ಅಥವಾ ಸಂದರ್ಭಕ್ಕೆ ಬಾಧೆ ಬಂದ ವಿನಾ **ಅದರ ಪ್ರತಿನಿಧಿಗಳು, ಉತ್ತರಾಧಿಕಾರಿಗಳು ಮತ್ತು ಹಸ್ತಾಂತರಗ್ರಾಹಿ ಎಂಬುದನ್ನು ಒಳಗೊಳ್ಳುವುದು. ಇವರುಗಳ ನಡುವೆ ಆದ ಕರಾರುಪತ್ರ :-**

ಅಡಮಾನದಾರನು ಅಡಮಾನಕರ್ತ/ಅಡಮಾನಕರ್ತೆಗೆ,------------------------------------------------------------------- ವಸತಿ ಯೋಜನೆಯಡಿಯಲ್ಲಿ, ಮನೆಯನ್ನು ಕಟ್ಟಲು ಈ ಅಡಮಾನ ಪತ್ರದಲ್ಲಿ ಈ ಕೆಳಗೆ ಉಲ್ಲೇಖಿಸಲಾದ ಷರತ್ತುಗಳನ್ನು ಪೂರೈಸುವ ಷರತ್ತುಗಳಿಗೊಳಪಟ್ಟು ಒಟ್ಟು ಆರ್ಥಿಕ ಸಹಾಯ ರೂ.------------------ಗಳನ್ನು ಸಹಾಯಧನವಾಗಿ ಒದಗಿಸಲು ಒಪ್ಪಲಾಗಿದ್ದು, ಅಡಮಾನಕರ್ತ/ಅಡಮಾನಕರ್ತೆಯು ಸದರಿ ಷರತ್ತುಗಳನ್ನು ತಪ್ಪದೇ ಪೂರೈಸಲು ಮತ್ತು ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಬಡ್ಡಿಯೊಡನೆ ಸಹಾಯಧನವನ್ನು ಮತ್ತು ಮನೆಯನ್ನು ಅಡಮಾನದಾರನಿಗೆ ಹಿಂದಿರುಗಿಸಲು ಒಪ್ಪಿದ್ದು, ಈಗ ಈ ಬಂಧಪತ್ರವು ಈ ಕೆಳಗಿನವುಗಳಿಗೆ ಸಾಕ್ಷಿಯಾಗಿದೆ;

1. ಮೇಲ್ಕಂಡ ಒಪ್ಪಂದದ ಅನ್ವಯ ರೂ.------------ಸಹಾಯಧನವನ್ನು ಪಡೆದುದಕ್ಕೆ ಪ್ರತಿಯಾಗಿ ಈ ಪತ್ರದಲ್ಲಿ ಕಾಣಿಸಿದ/ವರ್ಣಿಸಿದ ಸ್ವತ್ತನ್ನು ಅದರ ಅಂಗಭೂತಗಳೊಡನೆ ಅಡಮಾನಕರ್ತನು/ ಅಡಮಾನಕರ್ತಳು, ಅಡಮಾನುದಾರನಿಗೆ ಸಾದಾ ಅಡಮಾನವಾಗಿ ಈ ಮೂಲಕ ಮಾಡಿರುತ್ತಾನೆ/ಳೆ ಮತ್ತು ಅದನ್ನು ಸ್ಥಿರೀಕರಿಸುತ್ತಾನೆ/ಳೆ. ಸದರಿ ಅಡಮಾನವು ಅಡಮಾನಕರ್ತನು/ಳು ಈ ಕೆಳಗಿನ ಷರತ್ತುಗಳನ್ನು ಪೂರೈಸಲು ಮತ್ತು ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಅಡಮಾನದಾರನಿಗೆ ಸಂದಾಯ ಮಾಡಬೇಕಾದ ಮೊತ್ತಕ್ಕೆ ಜಾಮೀನಾಗಿರುತ್ತದೆ.
2. ಅಡಮಾನಕರ್ತನು/ಳು ಈ ಸಹಾಯಧನದಿಂದ ಕಟ್ಟಿದ ಮನೆಯನ್ನು 15 ವರ್ಷಗಳ ಕಾಲ ಅಡಮಾನದಾರನ ಲಿಖಿತ ಪರವಾನಿಗೆ ಇಲ್ಲದೆ ಮಾರಾಟ / ದಾನ / ಪುನರ್-ಅಡಮಾನ ಅಥವಾ ಇನ್ನಾವುದೇ ರೀತಿಯಿಂದ ಪರಭಾರೆ / ವಿಲೇವಾರಿ ಮಾಡತಕ್ಕದ್ದಲ್ಲ.

3. ಒಂದು ವೇಳೆ ಹೀಗೆ ಅಡಮಾನ ಮಾಡಿದ ಸ್ವತ್ತನ್ನು ಪರಭಾರೆ / ವಿಲೇವಾರಿ ಮಾಡಿದರೆ ಅಡಮಾನಕರ್ತ/ಳು ಸದರಿ ಸ್ವತ್ತನ್ನು ಅಂದರೆ ಮನೆಯನ್ನು ತಕ್ಷಣ ಯಾವುದೇ ತಕರಾರು ಇಲ್ಲದೇ ಅಡಮಾನದಾರನ ವಶಕ್ಕೆ ಒಪ್ಪಿಸಬೇಕು.

4. ಅಲ್ಲದೇ ಸಹಾಯಧನವಾಗಿ ನೀಡಿದ ಸಂಪೂರ್ಣ ರೂ.------------ಗಳ ಸಹಾಯಧನವನ್ನು ಪಡೆದ ದಿನದಿಂದ, ಷರತ್ತು ಉಲ್ಲಂಘನೆಯಾಗಿ ಸಂಪೂರ್ಣ ಸಹಾಯಧನವನ್ನು ಬಡ್ಡಿಯೊಡನೆ ಹಿಂದಿರುಗಿಸುವ ದಿನಾಂಕದವರೆಗಿನ ಅವಧಿಗೆ ಶೇಕಡಾ.11ರಂತೆ ಬಡ್ಡಿಯನ್ನು ಸೇರಿಸಿ ಅಡಮಾನದಾರನಿಗೆ ಒಂದೇ ಕಂತಿನಲ್ಲಿ ಹಿಂದಿರುಗಿಸಬೇಕು.

5. ಅಡಮಾನಕರ್ತನು/ಳು ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮತ್ತು / ಅಥವಾ ಷರತ್ತನ್ನು ಉಲ್ಲಂಘಿಸಿದ ಮೇಲೆ ಮೇಲ್ಕಂಡಂತೆ ಮನೆಯನ್ನು ಹಿಂದಿರುಗಿಸಲು ವಿಫಲವಾದಲ್ಲಿ ಅಥವಾ ಸಹಾಯಧನವನ್ನು ಬಡ್ಡಿಯೊಡನೆ ಹಿಂದಿರುಗಿಸದೇ ಇದ್ದಲ್ಲಿ ಅಡಮಾನದಾರನು ಸದರಿ ಅಡಮಾನವಿಟ್ಟ ಸ್ವತ್ತನ್ನು ವಶಕ್ಕೆ ತೆಗೆದುಕೊಂಡು ಬೇರೆ ಫಲಾನುಭವಿಗಳಿಗೆ ನೀಡಲು ಸ್ವತಂತ್ರನಾಗಿದ್ದಾನೆ.

6. ಮೇಲ್ಕಂಡ ಕ್ರಮ ಕೈಗೊಳ್ಳುವುದೇ ಅಲ್ಲದೆ ಅಡಮಾನದಾರನ/ಳಿಂದ ಷರತ್ತು ಉಲ್ಲಂಘನೆಯಾದಲ್ಲಿ ಕಾನೂನಿನ್ವಯ ಇನ್ನಿತರ ಕ್ರಮಗಳನ್ನು ಅಡಮಾನದಾರನು ತೆಗೆದುಕೊಳ್ಳಲು ಸ್ವತಂತ್ರನಾಗಿದ್ದಾನೆ.

7. ಈ ಬಂಧಪತ್ರವು ಈ ಕೆಳಗಿನವುಗಳಿಗೂ ಸಹ ಸಾಕ್ಷಿಯಾಗಿದೆ :-

ಅದೇ ಪ್ರತಿಫಲಕ್ಕಾಗಿ, ಅಡಮಾನಕರ್ತನು/ಳು ಅಡಮಾನಸ್ವತ್ತನ್ನು, ಸದರೀ ಸ್ವತ್ತಿನ ಮೇಲೆ ನಿರ್ಮಿಸಿದ ಅಥವಾ ನಿರ್ಮಿಸಬೇಕಾದ ಕಟ್ಟಡಗಳು ಮತ್ತು ಎಲ್ಲ ನಿಲುವು ಮತ್ತು ಎಲ್ಲಾ ನಿರ್ಮಿತವಾದ ಅಥವಾ ನಿರ್ಮಿತವಾಗಲಿರುವ ಕಟ್ಟಡಗಳನ್ನೊಳಗೊಂಡು ಅವುಗಳ ಅಂಗಭೂತಗಳೊಡನೆ, ಅಡಮಾನದಾರನಿಗೆ ಅಥವಾ ಅಡಮಾನದಾರನ ಪ್ರತಿನಿಧಿ, ಉತ್ತರಾಧಿಕಾರಿ ಮತ್ತು ಹಸ್ತಾಂತರ ಗ್ರಾಹಿಗೆ, ಈ ಬಂಧಪತ್ರದಲ್ಲಿ ಏರ್ಪಾಡು ಮಾಡಿದ ಷರತ್ತುಗಳನ್ನು , ಜವಾಬ್ದಾರಿಯನ್ನು ತಾನು ಪೂರೈಸಲು ಜಾಮೀನೆಂದು, ವಹಿಸಿಕೊಡುತ್ತಾನೆ/ಳೆ. ಎಲ್ಲಿಯವರೆಗೆ ಸದರಿ ಸ್ವತ್ತು ಅಡಮಾನವಾಗಿರುತ್ತದೋ ಅಲ್ಲಿಯವರೆಗೆ, ಅಡಮಾನಕರ್ತನು/ಳು, ಅಡಮಾನದ ಸ್ವತ್ತನ್ನು ತನ್ನ ಸ್ವಂತ ವೆಚ್ಚದಲ್ಲಿ ಸುಸ್ಥಿತಿಯಲ್ಲಿಡುವುದಾಗಿ ಮತ್ತು ಎಲ್ಲಾ ಪೌರಸಭಾ/ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ದರಗಳನ್ನು, ತೆರಿಗೆಗಳನ್ನು ಮತ್ತು ಇತರ ಎಲ್ಲ ವೆಚ್ಚಗಳನ್ನು ಸಂದಾಯ ಮಾಡುವುದಾಗಿ ಒಪ್ಪಿದ್ದಾನೆ/ಳೆ. ಹಾಗೆ ಸಂದಾಯ ಮಾಡಿರುವುದಕ್ಕೆ ರಸೀತಿಯನ್ನು ಅಡಮಾನದಾರನಿಗೆ ನೀಡಲೂ ಒಪ್ಪಿದ್ದಾನೆ/ಳೆ. ಒಂದು ವೇಳೆ ಈ ರೀತಿ ಸಂದಾಯ ಮಾಡದೇ ಹೋದಲ್ಲಿ, ಅಥವಾ ಅಡಮಾನದ ಸ್ವತ್ತನ್ನು/ಕಟ್ಟಡವನ್ನು ಸುಸ್ಥಿತಿಯಲ್ಲಿ ಇಡದೇ ಹೋದಲ್ಲಿ ಅಡಮಾನದಾರನು ಕಟ್ಟಡ/ಅಡಮಾನ ಸ್ವತ್ತನ್ನು , ಹಾಗೆ ಅವನು ಇಚ್ಛಿಸಿದಲ್ಲಿ ವಶಕ್ಕೆ ತೆಗೆದುಕೊಳ್ಳಲು ಮತ್ತು ಸದರಿ ಆಸ್ತಿಯನ್ನು ಸುಸ್ಥಿತಿಯಲ್ಲಿಡಲು ಬೇಕಾದ ಕ್ರಮಕೈಗೊಳ್ಳಲು, ಅಥವಾ ಸಂದಾಯ ಮಾಡಬೇಕಾದ ಹಣವನ್ನು ಸಂದಾಯ ಮಾಡಲು ಹಕ್ಕುಳ್ಳವನಾಗಿರುತ್ತಾನೆ. ಹೀಗೆ ಮಾಡಿದ ಪಕ್ಷದಲ್ಲಿ , ಅಡಮಾನದಾರನು ಈ ಕಾರಣಕ್ಕಾಗಿ ಮಾಡಿದ ಸಂಪೂರ್ಣ ವೆಚ್ಚವನ್ನು ಅಡಮಾನಕರ್ತನು/ಳು ನಿಗದಿತ ಬಡ್ಡಿಯೊಡನೆ ಅಡಮಾನುದಾರನಿಗೆ ನೀಡಲು ಒಪ್ಪಿದ್ದಾನೆ/ಳೆ.

8. ಅಡಮಾನ ಮಾಡಿದ ಸ್ವತ್ತು ಯಾವುದೇ ಬೋಜಾ/ಋಣಭಾರ ಇತ್ಯಾದಿಗಳಿಂದ ಮುಕ್ತವಾಗಿದೆ ಎಂದು ಅಡಮಾನಕರ್ತನು/ಳು ಘೋಷಿಸುತ್ತಾನೆ/ಳೆ. ಯಾವುದೇ ಕಾರಣಕ್ಕಾಗಿ, ಅಡಮಾನ ಮಾಡಿದ ಸ್ವತ್ತಿಗೆ ಸಂಬಂಧಿಸಿದಂತೆ, ವಿವಾದಗಳು ತಲೆದೋರಿದಲ್ಲಿ ಮತ್ತು ಅದಕ್ಕಾಗಿ ಅಡಮಾನದಾರನು ನಷ್ಟವನ್ನು ಅನುಭವಿಸಿದಲ್ಲಿ, ಅಂಥ ನಷ್ಟವನ್ನು ಭರಿಸಿಕೊಡಲು ಮತ್ತು ಅಡಮಾನ ಮಾಡಿದ ಸ್ವತ್ತನ್ನು ಕಾಪಾಡಲು ಅಡಮಾನುಕರ್ತನು/ಳು ಬದ್ಧವಾಗಿರುವುದಾಗಿ ಒಪ್ಪಿದ್ದಾಳೆ/ನೆ.

9. ಅಡಮಾನಕರ್ತನು/ಳು, ಬರೆದುಕೊಟ್ಟ ಕರಾರುಪತ್ರದ ಅಥವಾ ಈ ಅಡಮಾನಪತ್ರದ ಯಾವುದೇ ಕರಾರನ್ನು ಉಲ್ಲಂಘಿಸಿದ ಪ್ರಸಂಗದಲ್ಲಿ ಅಡಮಾನುದಾರನು, ಇನ್ನಿತರ ಕಾನೂನು ಕ್ರಮಗಳಲ್ಲದೆ, ಈಗಾಗಲೇ ಪ್ರತ್ಯೇಕವಾಗಿ ಬರೆದು ಕೊಡಲಾಗಿರುವ ಕರಾರುಪತ್ರದ ಅಂಶ 5ಮತ್ತು 6 ರಂತೆ ಕ್ರಮ ತೆಗೆದುಕೊಳ್ಳಲು ಒಪ್ಪಿದ್ದಾನೆ/ಳೆ.

10. ಅಡಮಾನಕರ್ತನು/ಳು ಅಡಮಾನ ಸ್ವತ್ತಿನ ಮಾಲೀಕತ್ವದ ದಸ್ತಾವೇಜು/ಕಾಗದಪತ್ರಗಳನ್ನು ಅಡಮಾನದಾರನಿಗೆ ಈ ಮೂಲಕ ನೀಡಿದ್ದಾನೆ, ಮತ್ತು ಆ ಸಂದರ್ಭದಲ್ಲಿ ಸೂಕ್ತ ಸ್ವೀಕೃತಿ ಪತ್ರವನ್ನು ಪಡೆದಿದ್ದಾನೆ.

## ತಪಶೀಲು

ಎಲ್ಲಾ ಆಸ್ತಿಯ ಜಾಗ / ಮನೆ ನಂಬರ್.................................................ರಲ್ಲಿ ನಿರ್ಮಾಣವಾಗಿರುವ ........................................................................
ಅಳತೆಯು

ಪೂರ್ವಕ್ಕೆ :

ಪಶ್ಚಿಮಕ್ಕೆ :

ಉತ್ತರಕ್ಕೆ :

ದಕ್ಷಿಣಕ್ಕೆ :

ಸಾಕ್ಷೀದಾರರ ಸಮಕ್ಷಮದಲ್ಲಿ ಈ ಅಡಮಾನಪತ್ರವನ್ನು ಓದಿ/ಕೇಳಿ ತಿಳಿದುಕೊಂಡು, ಅರ್ಥಮಾಡಿಕೊಂಡು ಒಪ್ಪಿ ಬರೆದುಕೊಟ್ಟಿರುತ್ತೇನೆ.

ಅಡಮಾನದಾರರ ಪರವಾಗಿ
(ಸರ್ಕಾರ/ನಿಗಮದ ಪರವಾಗಿ ನೇಮಿಸಲಾಗಿರುವ ಪ್ರತಿನಿಧಿ)

ಅಡಮಾನಕರ್ತರ ಸಹಿ
(ಫಲಾನುಭವಿ)

ಸಾಕ್ಷಿಗಳುಃ (ಸಹಿ ಮತ್ತು ಪೂರ್ಣ ವಿಳಾಸದೊಂದಿಗೆ)

1.

2.

*********

gmpi